ಅಧ್ಯಕ್ಷರು :— ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಕಾರ್ಯದರ್ಶಿ :— ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ 1999ನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :— ಮಂಡಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರವೇಕೆರೆ) :— ಮಾನ್ಯ ಅಧ್ಯಕ್ಷರೆ (ಅ) ತುರುವೇಕೆರೆ ತಾಲ್ಲೂಕು ಕಸಬಾ ಹೋಬಳಿ ಪುರದಪಾಳ್ಯಕ್ಕೆ ಹೇಮಾವತಿ ನೀರು ಹರಿದು ಬರುವ ಪ್ರದೇಶದ 20 ಹಳ್ಳಿಗಳ ಜನರಿಗೆ ಸಂಚಾರ ಸಂಪರ್ಕಕ್ಕಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಹಾಗೂ (ಆ) ತುರುವೇಕೆರೆ ತಾಲ್ಲೂಕು ದಂಡಿನಶಿವರ ಹೋಬಳಿಯ ಸಿದ್ಧಾಪುರ ಹಾಗೂ ದ್ಯಾಮಸಂದ್ರ ಗ್ರಾಮಗಳನ್ನು ಸ್ಥಳಾಂತರಿಸಿ ಪುನರ್ ವಸತಿ ಕಲ್ಪಿಸುವ ಬಗ್ಗೆ ಸದನಕ್ಕೆ ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, (ಅ) ಕರ್ನಾಟಕ ರಾಜ್ಯದ ಆಯುರ್ವೇದ ಉದ್ಯಮದ ಪರಿವೀಕ್ಷಕರು ಕರ್ನಾಟಕ ಭಾರತೀಯ ವೈದ್ಯ ಪದ್ಧತಿಯ ಔಷಧ ತಯಾರಕರ ಮೇಲೆ ಶೋಷಣೆ ಮಾಡುತ್ತಿರುವ ಬಗ್ಗೆ ಹಾಗೂ (ಆ) ಶ್ರೀಮತಿ ಕೆ.ಎ. ನಾಗರತ್ನ ಅವರು ಮಂಗಳೂರು ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ಉಪನ್ಯಾಸಕಿಯ ಹುದ್ದೆಯಿಂದ ವಂಚಿತೆಯಾದ ಬಗ್ಗೆ ಸದನಕ್ಕೆ ಅರ್ಜಿಗಳನ್ನು ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು :— ಅರ್ಜಿಗಳನ್ನು ಒಪ್ಪಿಸಲಾಯಿತು.

(4) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯಲ್ಲಿ ಅಧಿಕಾರಿ ಹುದ್ದೆಗಳು ಖಾಲಿಯಿದ್ದರೂ ಬಡ್ತಿ ನೀಡದಿರುವ ಬಗ್ಗೆ.

ಶ್ರೀ ಸಿ. ಭೈರೇಗೌಡ (ವೇಮಗಲ್) :— ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ತಮಗೆ ಒಂದು ಪತ್ರವನ್ನು ಕಳುಹಿಸಿದ್ದೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಬಡ್ತಿ ಕೊಡುವ ಬಗ್ಗೆ ಒಂದು ಸಮಿತಿ ಇದೆ, ಆ ಸಮಿತಿಯು ಸಭೆ ಸೇರಿ, ಆ ಪಟ್ಟಿಯನ್ನು ಕೂಡ ಉನ್ನತ ಮಟ್ಟದ ತೀರ್ಮಾನಕ್ಕೋಸ್ಕರ ಶಿಫಾರಸ್ಸು ಸಹ